# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪ್ರದೀಪ್ ಶೆಟ್ಟರ್ ಇವರು ನಿಯಮ-72 ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ

### ಪ್ರಶ್ನೆ:

ರಾಜ್ಯದಲ್ಲಿನ ನಗರ ಹಾಗೂ ಪಟ್ಟಣಗಳ ಮೂಲಸೌಕರ್ಯ ಮತ್ತು ನಾಗರಿಕ ಸೌಕರ್ಯಗಳ ಸುಧಾರಣೆಗೆ ಉದ್ದೇಶಿಸಿದ ಮುಖ್ಯಮಂತ್ರಿ ನಗರೋತ್ಥಾನ ಯೋಜನೆಯಡಿ. ಧಾರವಾಡ ಜಿಲ್ಲೆಯ ಪುರಸಭೆ ಹಾಗೂ ಪಟ್ಟಣ ಪಂಚಾಯತಿಗಳಿಗೆ ನಗರಾಭಿವೃದ್ಧಿ ಇಲಾಖೆಯಿಂದ ಬಿಡುಗಡೆಯಾಗಬೇಕಾದ ಸುಮಾರು 10 ಕೋಟಿ ರೂ. ಅನುದಾನ ಇನ್ನೂ ಬಿಡುಗಡೆಯಾಗಿಲ್ಲ. ಈ ಕುರಿತು ಭ್ರಷ್ಟಾಚಾರದ ಆರೋಪಗಳು ಹಾಗೂ ದೂರುಗಳು ಸಹ ವ್ಯಕ್ತವಾಗುತ್ತಿವೆ. ಇದರ ಪರಿಣಾಮವಾಗಿ ಧಾರವಾಡ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿ ಕಾರ್ಯಗಳು ಗಂಭೀರವಾಗಿ ಕುಂಠಿತಗೊಂಡಿವೆ.

ಅದರೊಂದಿಗೆ, ಧಾರವಾಡ ಜಿಲ್ಲೆಯ ಪಿಆರ್‌ಇಡಿ ಇಲಾಖೆಯ ಪಿಎಂಜಿಎಸ್‌ವೈ (30:54) ಯೋಜನೆಯಡಿ ಬಿಡುಗಡೆಯಾಗಬೇಕಾದ ಸುಮಾರು 75 ಲಕ್ಷ ರೂ. ಅನುದಾನ, ಇತರ ಅಭಿವೃದ್ಧಿ ಅನುದಾನಗಳು, ಪಿಡಬ್ಲ್ಯೂಡಿ ಇಲಾಖೆಯ ಎಂಡಿಆರ್ (50:54) ಯೋಜನೆಯಡಿ ಬಿಡುಗಡೆಯಾಗಬೇಕಾದ ಸುಮಾರು 135 ಕೋಟಿ ರೂ. ಹಾಗೂ ಎಎಚ್ ರಾಜ್ಯ ಹೆದ್ದಾರಿ ಯೋಜನೆಯಡಿ ಬಿಡುಗಡೆಯಾಗಬೇಕಾದ ಸುಮಾರು 38 ಕೋಟಿ ರೂ. ಅನುದಾನಗಳು ಇನ್ನೂ ಬಾಕಿ ಉಳಿದಿವೆ.

ಈ ಎಲ್ಲಾ ಕಾರಣಗಳಿಂದಾಗಿ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ತೀವ್ರ ಅಡ್ಡಿಯಾಗಿದ್ದು, ಈ ವಿಷಯದ ಕುರಿತು ಮಾನ್ಯ ನಗರಾಭಿವೃದ್ಧಿ ಸಚಿವರ ಗಮನ ಸೆಳೆದಿರುವ ಬಗ್ಗೆ.

### ಉತ್ತರ

ರಾಜ್ಯದಲ್ಲಿನ ನಗರ ಹಾಗೂ ಪಟ್ಟಣಗಳ ಮೂಲಸೌಕರ್ಯ ಮತ್ತು ನಾಗರಿಕ ಸೌಕರ್ಯಗಳ ಸುಧಾರಣೆಗೆ ಉದ್ದೇಶಿಸಿದ ಮಾನ್ಯ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ ಹಂತ-4 ರಡಿ ಧಾರವಾಡ ಜಿಲ್ಲೆಯ ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳಿಗೆ ಸರ್ಕಾರದಿಂದ ಸ್ಥಳೀಯ ಸಂಸ್ಥೆವಾರು ಅನುಮೋದಿತ ಕಾಮಗಾರಿಗಳ ಸಂಖ್ಯೆ, ಹಂಚಿಕೆ, ಬಿಡುಗಡೆ, ವೆಚ್ಚ ಹಾಗೂ ಬಿಡುಗಡೆಯಾಗಬೇಕಾದ ಬಾಕಿ ಮೊತ್ತದ ವಿವರವನ್ನು **ಅನುಬಂಧ** ದಲ್ಲಿ ನೀಡಿದೆ.

ಸದರಿ ಯೋಜನೆಯಡಿ ಮೂಲಭೂತ ಸೌಕರ್ಯಗಳಾದ ರಸ್ತೆ, ಚರಂಡಿ, ನೀರು ಸರಬರಾಜು, ಮಳೆ ನೀರು ಚರಂಡಿ, ಬೀದಿ ದೀಪ, ಉದ್ಯಾನವನ, ಸಮುದಾಯ ಭವನ ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳನ್ನು ತೆಗೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಧಾರವಾಡ ಜಿಲ್ಲೆಯ 05 ನಗರ ಸ್ಥಳೀಯ ಸಂಸ್ಥೆಗಳಿಗೆ ಒಟ್ಟು 75 ಕಾಮಗಾರಿಗಳ ಮೊತ್ತ ರೂ.2975.00 ಲಕ್ಷಗಳಿಗೆ ಕ್ರಿಯಾಯೋಜನೆ ಅನುಮೋದನೆಯಾಗಿರುತ್ತದೆ. ಇದರಲ್ಲಿ ಪೂರ್ಣಗೊಂಡ 62 ಕಾಮಗಾರಿಗಳ ಮೊತ್ತ ರೂ. 2563.36 ಲಕ್ಷಗಳ ಪೈಕಿ ರೂ. 2072.66 ಲಕ್ಷಗಳ ಮೊತ್ತದ ಬಿಲ್ ಪಾವತಿಯಾಗಿರುತ್ತದೆ. ಪ್ರಗತಿಯಲ್ಲಿರುವ 13 ಕಾಮಗಾರಿಗಳ ಮೊತ್ತ ರೂ. 411.64 ಲಕ್ಷಗಳನ್ನು ಪ್ರಗತಿಗನುಗುಣವಾಗಿ ಅನುದಾನವನ್ನು ಬಿಡುಗಡೆ ಮಾಡಲಾಗುವುದು.

ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ-4) ರಲ್ಲಿ ಯಾವುದೇ ರೀತಿಯ ಭ್ರಷ್ಟಾಚಾರ ನಡೆದಿರುವುದಿಲ್ಲ. ಹಾಗೂ ಈ ಕುರಿತು ಆರೋಪಗಳು/ಆಕ್ಷೇಪಣೆಗಳು/ ದೂರುಗಳು ಸ್ವೀಕೃತವಾಗಿರುವುದಿಲ್ಲ. ಹಾಗೂ ಧಾರವಾಡ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿ ಕಾರ್ಯಗಳು ಕುಂಠಿತಗೊಂಡಿರುವುದಿಲ್ಲ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವತಿಯಿಂದ ಧಾರವಾಡ ಜಿಲ್ಲೆಗೆ ಲೆಕ್ಕ ಶೀರ್ಷಿಕೆ-ಸಿಎಂಜಿಎಸ್‌ವೈ ಯೋಜನೆಯಡಿ ಗ್ರಾಮೀಣ ರಸ್ತೆಗಳ ನಿರ್ವಹಣೆಗೆ ರೂ.238.00 ಲಕ್ಷಗಳನ್ನು ಹಂಚಿಕೆ ಮಾಡಲಾಗಿದ್ದು, ಸದರಿ ಅನುದಾನದಲ್ಲಿ ಪಿಆರ್‌ಇಡಿ ಇಲಾಖೆಯಿಂದ ಕಾಮಗಾರಿಗಳನ್ನು ನಿರ್ವಹಣೆ ಮಾಡಲಾಗಿದ್ದು, ಇದುವರೆವಿಗೂ ರೂ.178.50 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಪ್ರಸ್ತುತ ಉಳಿಕೆ ರೂ.59.50 ಲಕ್ಷಗಳನ್ನು ಬಿಡುಗಡೆ ಮಾಡಲು ಕ್ರಮವಹಿಸಲಾಗುತ್ತಿದೆ.

ಲೋಕೋಪಯೋಗಿ ಇಲಾಖೆ ವತಿಯಿಂದ 2023-24, 2024-25 ಹಾಗೂ 2025-26ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 5054-03-337-0-17-154 ರಾಜ್ಯ ಹೆದ್ದಾರಿ ಸುಧಾರಣೆ ಹಾಗೂ 5054-04-337-0-01-154 ಜಿಲ್ಲಾ ಮುಖ್ಯರಸ್ತೆ ಸುಧಾರಣೆ ಇವುಗಳಡಿ ಬಾಕಿ ಬಿಲ್ಲುಗಳನ್ನು ಪಾವತಿಸಲು ಧಾರವಾಡ ವಿಭಾಗಕ್ಕೆ ಬಿಡುಗಡೆ ಮಾಡಿರುವ ಮೊತ್ತದ ವಿವರ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಲೆಕ್ಕ ಶೀರ್ಷಿಕೆ | ಬಿಡುಗಡೆಯಾದ ಹಣ | ವೆಚ್ಚ |
|---|---|---|---|
| | 2023-24 | | |
| 1 | 5054 ಜಿ.ಮು.ರ ಸುಧಾರಣೆ | 11605.98 | 11605.98 |
| 2 | 5054 ರಾ.ಹೆ ಸುಧಾರಣೆ | 1090.65 | 1090.65 |
| | ಒಟ್ಟು | 12696.63 | 12696.63 |
| | 2024-25 | | |
| 1 | 5054 ಜಿ.ಮು.ರ ಸುಧಾರಣೆ | 12911.26 | 12911.26 |
| 2 | 5054 ರಾ.ಹೆ ಸುಧಾರಣೆ | 2235.84 | 2235.84 |
| | ಒಟ್ಟು | 15147.10 | 15147.10 |
| | 2025-26 | | |
| 1 | 5054 ಜಿ.ಮು.ರ ಸುಧಾರಣೆ | 7230.56 | 5720.56 |
| 2 | 5054 ರಾ.ಹೆ ಸುಧಾರಣೆ | 200.00 | 197.05 |
| | ಒಟ್ಟು | 7430.56 | 5917.61 |

ಪ್ರಸ್ತುತ ಸದರಿ ಲೆಕ್ಕ ಶೀರ್ಷಿಕೆಗಳಡಿ ಡಿಸೆಂಬರ್-2025ರ ಅಂತ್ಯದವರೆಗೆ ಕ್ರಮವಾಗಿ ರೂ.13186.33 ಲಕ್ಷ ಹಾಗೂ ರೂ.3800.00 ಲಕ್ಷ ಮೊತ್ತದ ಬಾಕಿ ಬಿಲ್ಲುಗಳಿದ್ದು, ಸದರಿ ಬಿಲ್ಲುಗಳನ್ನು ಅನುದಾನ ಲಭ್ಯತೆ ಆಧರಿಸಿ ಹಂತ ಹಂತವಾಗಿ ಪಾವತಿಸಲು ಕ್ರಮವಹಿಸಲಾಗುತ್ತಿದೆ.

ಸಂಖ್ಯೆ:ನಅಇ 13 ಐಎಸ್‌ಟಿ 2026

(ರಹೀಂ ಖಾನ್)
ಪೌರಾಡಳಿತ ಹಾಗೂ ಹಜ್ ಸಚಿವರು

# ಅನುಬಂಧ-1

(ರೂ.ಲಕ್ಷಗಳಲ್ಲಿ)

| ಕ್ರಸಂ | ನಗರ ಸ್ಥಳೀಯ ಸಂಸ್ಥೆ ಹೆಸರು | ಹಂಚಿಕೆಯಾದ ಅನುದಾನ | ಅನುಮೋದಿತ ಕ್ರಿಯಾ ಯೋಜನೆ ಮೊತ್ತ | | ಪೂರ್ಣಗೊಂಡ ಕಾಮಗಾರಿಗಳು | | ಪ್ರಗತಿಯಲ್ಲಿರುವ ಕಾಮಗಾರಿಗಳು | | ಬಿಡುಗಡೆಯಾದ ಮೊತ್ತ | ಖರ್ಚಾದ ಮೊತ್ತ |
|---|---|---|---|---|---|---|---|---|---|---|
| | | | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | | |
| 1 | ಅಳ್ನಾವರ ಪಟ್ಟಣ ಪಂಚಾಯತ | 500.00 | 15 | 425.00 | 15 | 425.00 | 0 | 0.00 | 399.28 | 399.28 |
| 2 | ಅಣ್ಣಿಗೇರಿ ಪುರಸಭೆ | 1000.00 | 14 | 850.00 | 12 | 850.00 | 2 | 0.00 | 731.75 | 731.75 |
| 3 | ಕಲಘಟಗಿ ಪಟ್ಟಣ ಪಂಚಾಯತ | 500.00 | 14 | 425.00 | 7 | 205.00 | 7 | 220.00 | 80.95 | 80.95 |
| 4 | ಕುಂದಗೋಳ ಪಟ್ಟಣ ಪಂಚಾಯತ | 500.00 | 15 | 425.00 | 12 | 424.36 | 3 | 0.64 | 348.19 | 347.55 |
| 5 | ನವಲಗುಂದ ಪುರಸಭೆ | 1000.00 | 17 | 850.00 | 16 | 659.00 | 1 | 191.00 | 512.49 | 512.49 |
| | ಒಟ್ಟು | **3500.00** | **75** | **2975.00** | **62** | **2563.36** | **13** | **411.64** | **2072.66** | **2072.02** |

ಸಹಿ/-
Project Director
DUDC Dharwad